ಶ್ರೀ ವಾಟಾಳ್ ನಾಗರಾಜ್ :- ರಾತ್ರಿ 12 ಗಂಟೆಯವರೆಗೂ ಬೇಕಾದರೆ ಕುಳಿತುಕೊಳ್ಳುತ್ತೇವೆ. ಈಗ ಹೇಳಿಕೆ ಕೊಡಲಿ.

ಅಧ್ಯಕ್ಷರು :- ಈಗ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994ನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ವಿ. ದೇಶಪಾಂಡೆ :- ಇಲ್ಲ, ತಾವು ಅದನ್ನು ಈಗ ತೆಗೆದುಕೊಳ್ಳಬಾರದು. 2 ಬಿಲ್ ಅಲ್ಲ 5 ಬಿಲ್ ಪಾಸ್ ಮಾಡಿ. ಈಗ ಶ್ರೀ ಗೋಪಿನಾಥ್ ಸಾಂದ್ರರವರು ಇದ್ದಾರೆ ಅವರ ಬಗ್ಗೆ ಮುಗಿಯಲಿ. ಶ್ರೀ ವಾಟಾಳ್ ನಾಗಾರಾಜ್‌ರವರದು ಒಂದು ಇದೆ. ಅದನ್ನು ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಗೃಹ ಮಂತ್ರಿಯವರಿದ್ದಾರೆ. ಅವರಿಂದ ನನಗೆ ಹೇಳಿಕೆ ಬರಲಿ.

ಶ್ರೀ ಆರ್. ವಿ. ದೇಶಪಾಂಡೆ :- ತಾವು ಮಾನ್ಯ ಮುಖ್ಯಮಂತ್ರಿಯವರನ್ನು ಕರೆಯಿಸಬೇಕು. ನಾವು ಎಷ್ಟು ಹೊತ್ತು ಕುಳಿತುಕೊಳ್ಳಬೇಕು ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮುಖ್ಯಮಂತ್ರಿಯವರು ಬರುತ್ತಾರೆ. ಅವರು ಬರುವುದರೊಳಗೆ ....

ಅಧ್ಯಕ್ಷರು :- ಇಲ್ಲಿ ಎಲ್ಲರೂ ಶಾಂತತೆಯನ್ನು ಕಾಯ್ದುಕೊಳ್ಳಬೇಕು, ಮತ್ತು ಸಭೆಯಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ. ಈಗ ವಿಧೇಯಕವನ್ನು ತೆಗೆದುಕೊಳ್ಳೋಣ.

(2) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994 ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಬಿ.ಶಿವಣ್ಣ : (ವೈದ್ಯಕೀಯ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೆ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 1994ನ್ನು ಪರ್ಯಾ ಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ಹೌಸ್ ಅಡ್ಜರ್ನ್ ಮಾಡಿ, ಮನೆಗೆ ಹೋಗಿಬಿಡೋಣ. ಮುಖ್ಯ ಮಂತ್ರಿಗಳು ಸಭೆಗೆ ಬರುವುದಿಲ್ಲ ಎಂದರೆ ಹೇಗೆ, ಸರ್ಕಾರ ಹೇಳಿದ ಪ್ರಕಾರ ಬಿಸಿನೆಸ್ ಆಗಬೇಕಾಗುತ್ತದೆ. ನಾವು ಏತಕ್ಕೆ ಇಲ್ಲಿ ಕುಳಿತುಕೊಳ್ಳಬೇಕು, ನಮಗೆ ಏನು ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಸಿ. ಭೈರೇಗೌಡಃ- ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ನಮಗೆ ಗೊತ್ತಿಲ್ಲ. ಈಗ ಅವರು ಮಂಡನೆ ಮಾಡಿದ್ದೇವೆ ಎಂದು ಹೇಳುತ್ತಾರೆ, ಹಾಗಿದ್ದರೆ ಅದರಲ್ಲಿ ಏನು ಇದೆ ಎಂದು ಸ್ವಲ್ಪ ವಿವರಣೆ ಕೊಡಲಿ. ವಿವರಣೆ ಕೊಡದೇ ತಾವು ಮತಕ್ಕೆ ಹಾಕುವುದಾದರೆ ಅದು ನಮ್ಮ ನಿಯಮಾವಳಿಗೆ ಅಥವಾ ಸಂಪ್ರದಾಯಕ್ಕೆ ವಿರುದ್ಧವಾಗುತ್ತದೆ. ದಯವಿಟ್ಟು ವಿವರಣೆ ಕೊಡಲಿ.

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಶಾಂತತೆಯನ್ನು ಕಾಯ್ದುಕೊಳ್ಳಬೇಕು. ಎಲ್ಲರೂ ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ.

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಇದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಪ್ರಾರಂಭಿಸುವಂತಹ ಒಂದು ಮಸೂದೆಯಾಗಿದೆ 1975ರಲ್ಲಿ ಮಾನ್ಯ ಸಿದ್ಧವೀರಪ್ಪ ಎನ್ನುವರು ಆರೋಗ್ಯ ಮಂತ್ರಿಗಳಾಗಿದ್ದ ಕಾಲಕ್ಕೆ ಇಲ್ಲಿ ಇಂತಹ ಒಂದು ಬಿಲ್ ಪಾಸ್ ಆಗಿತ್ತು. ಆದರೆ ಇದು ವಿಧಾನ ಪರಿಷತ್ತಿನಲ್ಲಿ ಪಾಸ್ ಆಗದ ಕಾರಣ ಬಿಲ್ ಹಾಗೆಯೇ ಉಳಿದಿತ್ತು. 1986ರಲ್ಲಿ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೂ ಇಂತಹ ಆರೋಗ್ಯ ವಿಶ್ವವಿದ್ಯಾನಿಲಯಗಳನ್ನು ತಾವು ಸ್ಥಾಪಿಸಬೇಕು ಎಂದು ಪತ್ರಗಳನ್ನು ಬರೆದರು. ಅದರಂತೆ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಇಂತಹ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದರು. ಆದರೆ ಕರ್ನಾಟಕ ಸರ್ಕಾರ ಸ್ಥಾಪನೆ ಮಾಡುವುದಕ್ಕೆ ಆಗಲಿಲ್ಲ. 1987ರಲ್ಲಿ ಕ್ಯಾಬಿನೆಟ್ ಒಂದು ನಿರ್ಣಯ ಮಾಡಿತು ಏನೆಂದರೆ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಆರೋಗ್ಯದ ಸಲುವಾಗಿ ಸ್ಥಾಪನೆ ಮಾಡಬೇಕು ಎಂದು. ಆ ಕಾಲಕ್ಕೆ ಡಾ. ಹೆಚ್. ನರಸಿಂಹಯ್ಯ ಅವರು ಈ ಸಂಬಂಧದ ಸಮಿತಿ ಅಧ್ಯಕ್ಷರಾಗಿ ಒಂದು ವರದಿ ಕೊಟ್ಟರು. ಅದೇ ರೀತಿ ನವನೀತ (ಫಾರ್ಮರ್ ವೈಸ್ ಛಾನ್ಸಲರ್) ಅವರೂ ಕೂಡ ವಿಶ್ವವಿದ್ಯಾನಿಲಯದ ಬಗ್ಗೆ ಒಂದು ವರದಿ ಕೊಟ್ಟರು. ಹಾಗಾಗಿ ಆ ರಿಪೋರ್ಟ್‌ಗಳ ಪ್ರಕಾರ ಒಂದು ವಿಶ್ವವಿದ್ಯಾನಿಲಯ ಕರ್ನಾಟಕ ರಾಜ್ಯದಲ್ಲಿ ಆಗಬೇಕು ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು 94ರ ಬಜೆಟ್ ಭಾಷಣದಲ್ಲಿ ಹೇಳಿದರು. ಕರ್ನಾಟಕ ರಾಜ್ಯದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ ಆಗುತ್ತದೆ ಎಂದು ಹೇಳಿದರು. ಆದಕಾರಣ 28-8-94ರಲ್ಲಿ ಸಂಪುಟ ಸಭೆಯಲ್ಲಿ ಅದು ಪಾಸಾಗಿ ಈಗ ತಮ್ಮ ಮುಂದೆ ಬಂದಿದ್ದೇವೆ. ನಾನು ತಮಗೆಲ್ಲರಿಗೆ ಕೇಳಿಕೊಳ್ಳುವುದೇನೆಂದರೆ ಈ ಮಸೂದೆಯನ್ನು ಪಾಸ್ ಮಾಡಿ ಕೊಡಬೇಕೆಂದು,

ಶ್ರೀ ಆರ್.ವಿ.ದೇಶಪಾಂಡೆ(ವಿರೋಧ ಪಕ್ಷದ ನಾಯಕರು):- ತತ್ವಶಃ ಇದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಇದನ್ನು ಸ್ವಾಗತ ಮಾಡುತ್ತೇವೆ. ಈ ಬಿಲ್ ಬಂದಿದೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ತಾವೇ ಹೇಳಿದ ಹಾಗೆ 87ನೇ ಇಸವಿಯಲ್ಲಿ ನಾವೇ ತೆಗೆದುಕೊಂಡ ನಿರ್ಣಯ ಇದು. ನಮ್ಮ ಸರ್ಕಾರ ಇದ್ದಾಗ ಈ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ ಆಗಬೇಕು ಎಂದು ನಿರ್ಣಯವಾಗಿತ್ತು. ಆದರೆ ಅದಕ್ಕೆ ರಾಜೀವ್‌ಗಾಂಧಿ

ಹೆಸರನ್ನು ನಾವು ಸಜೆಸ್ಟ್ ಮಾಡಿರಲಿಲ್ಲ. ಆ ಹೆಸರನ್ನು ನೀವು ಸಜೆಸ್ಟ್ ಮಾಡಿದಿರಿ. ನೀವು ಮಾಡಿದ ಕೆಲಸ ಅಂದರೆ ಇದಕ್ಕೆ ರಾಜೀವ್‌ಗಾಂಧಿ ಹೆಸರನ್ನು ಇಟ್ಟಿದ್ದು ಅಷ್ಟೇ, ಆದರೆ ನಿರ್ಣಯ ಮಾಡಿದ್ದು ನಾವು. ಮೊದಲು ನಾವು ಹಸಿರು ಕಾರ್ಡು ಕೊಟ್ಟೆವು, ಅದಕ್ಕೆ ಫೋಟೋ ಹಾಕಲಿಲ್ಲ. ಇವರು ಅದಕ್ಕೆ ಒಂದು ಫೋಟೋ ಹಾಕಿದ್ದೇ ಕೆಲಸ. ಹಾಗಾಗಿ ಇವರು ಇದಕ್ಕೆ ರಾಜೀವ್‌ಗಾಂಧಿ ಹೆಸರು ಕೊಟ್ಟಿದ್ದಾರೆ, ಏತಕ್ಕೆ ಕೊಟ್ಟಿದ್ದಾರೆ, ಎಂಬುದು ಅವರಿಗೆ ಬಿಟ್ಟಿದ್ದು.

I do not want to comment on that.

ಆದುದರಿಂದ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ತಾವು ಇದರ ಮುಖ್ಯ ಕಛೇರಿಯನ್ನು ಮೈಸೂರಿನಲ್ಲಿ ಮಾಡಿರುವುದಕ್ಕೆ ನನ್ನ ವಿರೋಧ ಇಲ್ಲ. ಆದರೆ ನೀವು ಯಾವ ಉದ್ದೇಶಕ್ಕಾಗಿ ರೀಸರ್ಚ್ ಡೆವಲಪ್‌ಮೆಂಟ್ ಮಾಡಬೇಕೆಂದು ಮಾಡಿದ್ದೀರಲ್ಲಾ ಆ ಉದ್ದೇಶ ಸಫಲವಾಗಬೇಕಾದರೆ ಅದಕ್ಕೆ ಬೆಂಗಳೂರು ಪ್ಲಾಪರ್ ಪ್ಲೇಸ್. ಏಕೆಂದರೆ ಇವತ್ತು ಬೆಂಗಳೂರಿನಲ್ಲಿ ಎಲ್ಲಾ ಸ್ಪೆಷಲೈಸೇಷನ್ ಇದೆ. ನಮ್ಮ ಜಯದೇವಹೃದ್ರೋಗ ಸಂಸ್ಥೆ ಇರಬಹುದು, ಸಂಜಯ ಗಾಂಧಿ ಆಸ್ಪತ್ರೆ ಇರಬಹುದು, ಇಂತಹ ಸ್ಪೆಷಲೈಸೇಷನ್ ಎಲ್ಲಾ ಬೆಂಗಳೂರಿನಲ್ಲಿ ಇರುವಾಗ ತಾವು ಇದರ ಮುಖ್ಯ ಕಛೇರಿಯನ್ನು ಮೈಸೂರಿನಲ್ಲಿ ಯಾವ ಒಂದು ಉದ್ದೇಶಕ್ಕಾಗಿ ಮಾಡಿದ್ದೀರಿ, ಆ ಉದ್ದೇಶ ಸಫಲವಾಗುವುದಕ್ಕೆ ಸಾಧ್ಯವಿಲ್ಲ ಎಂದು ನನ್ನ ಅನಿಸಿಕೆ. ಅದೇ ರೀತಿ 5 ಮೆಡಿಕಲ್ ಕಾಲೇಜುಗಳು ಬೆಂಗಳೂರಿನಲ್ಲಿವೆ. ಹಾಗಾಗಿ ನಾನು ಸರ್ಕಾರಕ್ಕೆ ಇಷ್ಟೇ ಸಲಹೆ ಮಾಡುತ್ತಿದ್ದೇನೆ, ಇದರಲ್ಲಿ ಒಂದು ಒಳ್ಳೆಯ ಉದ್ದೇಶವಿದೆ. ನಾವು ಈ ಮಸೂದೆಯನ್ನು ಸ್ವಾಗತ ಮಾಡುತ್ತೇವೆ. ತಾವು ಏನು ಒಂದು ಒಳ್ಳೆಯ ಅಭಿಪ್ರಾಯದಿಂದ ಈ ಬಿಲ್ ತಂದಿರಿ, ಆ ಉದ್ದೇಶ ಸಫಲವಾಗಬೇಕಾದರೆ, ಇದರ ಮುಖ್ಯ ಕಛೇರಿ ಬೆಂಗಳೂರಿನಲ್ಲಿ ಇದ್ದರೆ ಹೆಚ್ಚು ಪರಿಣಾಮಕಾರಿ ಆಗುತ್ತಿತ್ತು ಎಂದು ನನ್ನ ಭಾವನೆ.

7.00. ಪಿ.ಎಂ.

ಶ್ರೀ ಬಿ.ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆ ವೈದ್ಯಕೀಯ ಕಾಲೇಜು ಪ್ರಾರಂಭವಾಗಿದ್ದು ಮೈಸೂರಿನಲ್ಲಿ, ಮೈಸೂರಿನ ವಾತಾವರಣ ಹೇಗೆ ಎಂದು ತಮಗೆ ಗೊತ್ತಿದೆ, ಅಲ್ಲಿ ವಿದ್ಯಾಭ್ಯಾಸಕ್ಕೆ ಸಾಕಷ್ಟು ವ್ಯವಸ್ಥೆಗಳಿವೆ, ಆದರೆ ಬೆಂಗಳೂರಿನಲ್ಲಿ ಜನಸಂಖ್ಯೆ ಬೆಳೆಯುತ್ತಿದೆ ಮತ್ತು ಸಾಕಷ್ಟು ಜನಸಂಖ್ಯೆ ಇದೆ. ಅದಕ್ಕಾಗಿ ಸರ್ಕಾರದ ಉದ್ದೇಶ ಏನೆಂದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು ಮತ್ತು ಇತರೆಯವರಿಗೆ ಅನುಕೂಲವಾಗುವ ಸಲುವಾಗಿ ಮೈಸೂರಿನಲ್ಲಿ ಪ್ರಾರಂಭವಾಗಿದೆ. ಈ ಶ್ರೇಯಸ್ಸು ನಮ್ಮ ಸಂಪುಟ ಸಭೆಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಸಲ್ಲುತ್ತದೆಂದು ಹೇಳುತ್ತಾ, ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಒಪ್ಪಬೇಕು ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ):- ಈ ವಿಧೇಯಕವನ್ನು ಸ್ವಾಗತ ಮಾಡುವ ಮನಸ್ಸು ನನಗೆ ಇದ್ದರೂ ಸಹಿತ ನಾನು ಸ್ವಾಗತ ಮಾಡುವುದಕ್ಕೆ ಹೋಗುತ್ತಿಲ್ಲ. ಏಕೆ ಎಂದು ಹೇಳಿದರೆ....

ಶ್ರೀ ಎಲ್.ಆರ್.ಶಿವರಾಮೇಗೌಡಃ- ನಮಗೆ ನ್ಯಾಯ ದೊರಕಿಸಿಕೊಡಿ. ಇವತ್ತು ಏನಾಗಿದೆ ನಾಗಮಂಗಲ ತಾಲ್ಲೂಕನ್ನು ಶಾಶ್ವತ ಬರಗಾಲ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ನಾವು ಪ್ರತಿ ಅಧಿವೇಶನದಲ್ಲೂ ಗಲಾಟೆ ಮಾಡುತ್ತೇವೆ. ತುರುವೆಕೆರೆ ಮತ್ತು ಬೇರೆ ಊರುಗಳನ್ನು ಸೇರಿಸಿ ನಾಗಮಂಗಲವನ್ನು ಬಿಟ್ಟರೆ ಹೇಗೆ? ತಾವು ಅವರಿಂದ ಸರಿಯಾದ ಉತ್ತರವನ್ನು ನಮಗೆ ಕೊಡಿಸಲಿಲ್ಲ.

ಅಧ್ಯಕ್ಷರು :- ಸ್ವಲ್ಪ ಸಮಾಧಾನವಾಗಿರಿ, ಮಂತ್ರಿಗಳು ಏನು ಹೇಳಿದರೆಂದರೆ, ಎಲ್ಲಿ ಈ ರೀತಿ 30 ಇಂಚು ಮಳೆ ಕಡಿಮೆ ಆಗಿದೆ, ನೀರಾವರಿ ಕಡಿಮೆ ಇದೆ, ಅದನ್ನು ತಾವು ಹೇಳಿದರೆ, ಅದನ್ನು ನೋಡಿ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಅದನ್ನು ಹೇಳಿದ ಮೇಲೆ...

ಶ್ರೀ ಎಲ್.ಆರ್.ಶಿವರಾಮೆಗೌಡಃ- ಹಿಂದೆ ಮಲೆನಾಡು ಅಭಿವೃದ್ಧಿ ಮಂಡಲಿ ಆಗತಕ್ಕಂಥ ಸಂದರ್ಭದಲ್ಲಿ ಆ ಭಾಗದ ಸದಸ್ಯರು ಧರಣಿ ಮಾಡುವ ಘಟ್ಟಕ್ಕೆ ಹೋಗಿದ್ದರು, ನಾನು ನಿಮ್ಮನ್ನು ಕೇಳುತ್ತಿದ್ದೇನೆ, ನಿಮಗೆ ನಾಗಮಂಗಲದ ಪರಿಚಯ ಹೊಸದಾಗಿ ಏನೂ ಇಲ್ಲ,ದಿನ ಬೆಳಿಗ್ಗೆ ಎದ್ದರೆ ಕುಡಿಯುವ ನೀರಿಲ್ಲದೆ ಜನ ಒದ್ದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾಗಮಂಗಲವನ್ನು ಸೇರಿಸದೆ ಇರತಕ್ಕಂತ ಮಟ್ಟಕ್ಕೆ ಹೋದರೆ ನನಗೆ ನ್ಯಾಯ ಎಲ್ಲಿಂದ ದೊರಕುತ್ತದೆಂದು ಹೇಳಿ. ನೀವು ನನಗೆ ನ್ಯಾಯ ಒದಗಿಸಿಕೊಡಿ. ದಯವಿಟ್ಟು ನಾಗಮಂಗಲವನ್ನು ಕೂಡ ಸೇರಿಸಿ.

ಅಧ್ಯಕ್ಷರುಃ- ನಾಗಮಂಗಲವನ್ನು ಸೇರಿಸುವುದು ಅಲ್ಲ, ಯಾವುದು ಇದರ ಪ್ರಕಾರ 30 ಇಂಚಿಗಿಂತ ಕಡಿಮೆ ಮಳೆ ಆಗಿದೆ, ಅದನ್ನು ಸೇರಿಸುತ್ತೇವೆ ಎಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಃ- ಮಾನ್ಯ ಅಧ್ಯಕ್ಷರೇ, ಈ ವೈದ್ಯಕೀಯ ವಿಶ್ವವಿದ್ಯಾಲಯವನ್ನು ಮಾಡತಕ್ಕಂಥಾದ್ದು ಮತ್ತು ತಾಂತ್ರಿಕ ವಿಶ್ವವಿದ್ಯಾಲಯಗಳನ್ನು ಪ್ರತ್ಯೇಕವಾಗಿ ಮಾಡತಕ್ಕದ್ದರ ಬಗ್ಗೆ ನನ್ನದೇ ಆದ ಅಭಿಪ್ರಾಯವಿದೆ. ಏಕೆ ಎಂದು ಹೇಳಿದರೆ ಈಗ ವಿಶ್ವವಿದ್ಯಾಲಯದಲ್ಲಿ ಪರ್‌ಟಿಕ್ಯುಲರ್‌ಲಿ ವೈದ್ಯಕೀಯ ಶಿಕ್ಷಣ ಇರಬಹುದು ಅಥವಾ ತಾಂತ್ರಿಕ ಶಿಕ್ಷಣ ಇರಬಹುದು, ಇವುಗಳಿಗೆಲ್ಲಾ ಅಕಾಡೆಮಿಕ್ ಸ್ಟ್ಯಾಂಡರ್ಡ್‌ನ್ನು ಡಿಸೈಡ್ ಮಾಡಲಿಕ್ಕೆ ಎಂದು ಹೇಳಿಬಿಟ್ಟು ಈಗ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಒಂದು ಕಡೆ ಇದೆ, ಟೆಕ್ನಿಕಲ್ ಎಜುಕೇಷನ್ ಡಿಸೈಡ್ ಮಾಡಲಿಕ್ಕೆ ಅಂತ ಹೇಳಿ ಆಲ್ ಇಂಡಿಯಾ ಬೋರ್ಡ್ ಒಂದು ಕಡೆ ಇದೆ, ಮತ್ತೇ ಈ ವಿಶ್ವವಿದ್ಯಾಲಯಗಳನ್ನು ನಾವು ಏಕೆ ಮಾಡುತ್ತೇವೆ. ಅಲ್ಲಿ ಒಂದು ಕಡೆ ಅಕಾಡೆಮಿಕ್ ಸ್ಟ್ಯಾಂಡರ್ಡ್ ಅನ್ನು ಮೈಂಟೈನ್ ಮಾಡುವುದರ ಜೊತೆಗೆ, ಅದನ್ನು ಆಡಳಿತದ ದೃಷ್ಟಿಯಿಂದಾಗಿ ಸುಲಭವಾಗಲೀ ಎನ್ನುವ ದೃಷ್ಟಿಯಿಂದ ನಾವು ಈ ರೀತಿ ಮಾಡಿಕೊಂಡು ಬರುತ್ತಾ ಇದ್ದೇವೆ, ಈಗಾಗಲೇ ಸುಮಾರು 7-8 ವಿಶ್ವವಿದ್ಯಾಲಯಗಳನ್ನು ನಾವು ಮಾಡಿದ್ದೇವೆ, ಲೆಕ್ಕವಿಲ್ಲದಷ್ಟನ್ನು ನಾವು ಮಾಡಿದ್ದೇವೆ. ಈಗ

ಸರ್ಕಾರದವರು ಬಹಳ ಕಷ್ಟಪಟ್ಟಿದ್ದಾರೆಂಬುದು ನನಗೆ ಗೊತ್ತು. ಇವರು ಇದನ್ನು ಕಳೆದ 2-3 ವರ್ಷಗಳಿಂದ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿ ಅವರು ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ; ಎಲ್ಲಾ ಕಡೆಗಳಲ್ಲೂ ಹೋಗಿ ಏನಾಗಿದೆ ಎಂಬುದನ್ನು ತಿಳಿದುಕೊಂಡು ಆರೋಗ್ಯ ಇಲಾಖೆಯವರ ಸಹಕಾರದಿಂದ ಈ ಪ್ರಯತ್ನ ಮಾಡಿದ್ದಾರೆ. ನಾನು ಅದನ್ನು ಪ್ರಶಂಸಿಸುತ್ತೇನೆ. ಆದರೆ ಯಾವ ಉದ್ದೇಶದಿಂದ ಇವರು ಮಾಡುತ್ತಿದ್ದಾರೆ ಎಂಬುದು ನನಗಿನ್ನೂ ಕನ್ವಿನ್ಸ್ ಆಗುತ್ತಿಲ್ಲ. ಏಕೆ ಎಂದು ನಾನು ನನ್ನ ಅಭಿಪ್ರಾಯವನ್ನು ಎಕ್ಸ್‌ಪ್ರೆಸ್ ಮಾಡಿಬಿಡುತ್ತೇನೆ. ಈ ವಿಧೇಯಕ ಪಾಸೂ ಆಗುತ್ತದೆ, ವಿಶ್ವವಿದ್ಯಾಲಯದವರು ಮುಖ್ಯಮಂತ್ರಿಯವರು, ಕ್ಯಾಬಿನೆಟ್ ಮನಸ್ಸು ಮಾಡಿದರೆ ಇನ್ನು ಎರಡು ತಿಂಗಳ ಒಳಗಡೆ ವಿಶ್ವವಿದ್ಯಾಲಯದಿಂದ ತೆಗೆದುಕೊಂಡು ಬರಬಹುದು, ಆದರೆ ನನ್ನ ಅಪ್ರಹೆನ್‌ಷನ್ಸ್ ಅನ್ನು ಇವತ್ತೇ ನಾನು ಎಕ್ಸ್‌ಪ್ರೆಸ್ ಮಾಡಿದ್ದು; ಇದು ರೆಕಾರ್ಡ್‌ನಲ್ಲಿ ಇರಲಿ ಎಂಬ ಉದ್ದೇಶಕ್ಕಾಗಿ. ಬೆಳಗಾಂ ಮೆಡಿಕಲ್ ಕಾಲೇಜಿನವರು ಇನ್ನು ಮೇಲೆ ಪ್ರತಿಯೊಂದಕ್ಕೂ ಮೈಸೂರಿಗೆ ಬರಬೇಕಾಗುತ್ತದೆ. ಗುಲ್ಬರ್ಗ ಮೆಡಿಕಲ್ ಕಾಲೇಜಿನವರು ಮೈಸೂರಿಗೆ ಇನ್ನು ಮೇಲೆ ಹೋಗಬೇಕಾಗುತ್ತದೆ. ಈಗಾಗಲೇ ಪ್ರಶ್ನೆ ಪತ್ರಿಕೆಗಳು, ಉತ್ತರ ಪತ್ರಿಕೆಗಳು ಬಹಿರಂಗವಾಗಿ ಚರ್ಚೆಯಾಗತಕ್ಕದ್ದನ್ನು ನೋಡುತ್ತಿದ್ದೇವೆ. ಇದಕ್ಕೆ ಡೆಂಟಲ್, ನರ್ಸಿಂಗ್ ಕಾಲೇಜುಗಳು ಸಹ ಸೇರಿಕೊಂಡಿವೆ. ಬೀದರ್‌ನಿಂದ ಮೈಸೂರಿಗೆ ಎಲ್ಲರೂ ಹೋಗಬೇಕಾಗುತ್ತದೆ. ಬೆಳಗಾಂನಿಂದ ಮೈಸೂರಿಗೆ ಎಲ್ಲರೂ ಹೋಗಬೇಕಾಗುತ್ತದೆ. ಟೆಕ್ನಿಕಲ್ ಕಾಲೇಜನ್ನು ಬೆಳಗಾಂದಲ್ಲಿ ಇವತ್ತು ಮಾಡುತ್ತಿದ್ದೀರಿ. ಆಗ ಮೈಸೂರಿನವರು ಬೆಳಗಾಂಗೆ ಹೋಗಬೇಕಾಗುತ್ತದೆ. ಬೀದರ್‌ನವರು ಬೆಳಗಾಂಗೆ ಹೋಗಬೇಕಾಗುತ್ತದೆ. ಈ ಕನ್‌ಸೆಪ್ಟ್ ಏನೆಂದು ಅರ್ಥವಾಗುತ್ತಿಲ್ಲ. ಯೂನಿವರ್ಸಿಟಿಗಳನ್ನು ಬೇರೆ ಬೇರೆ ಮಾಡಿದ ಉದ್ದೇಶವೇನು? ಗುಲ್ಬಾರ್ಗಾದಲ್ಲಿ, ಧಾರವಾಡದಲ್ಲಿ ಏತಕ್ಕೆ ಯೂನಿವರ್ಸಿಟಿಗಳನ್ನು ಮಾಡಿದೆವು. ಕುವೆಂಪು ವಿಶ್ವವಿದ್ಯಾನಿಲಯ ಎಂದು ಏತಕ್ಕೆ ಮಾಡಿದೆವು. ಮಂಗಳೂರು ವಿಶ್ವವಿದ್ಯಾನಿಲಯ ಎಂದು ಏತಕ್ಕೆ ಮಾಡಿದೆವು? ಇದು ನನಗೆ ಇನ್ನೂ ಕನ್‌ವಿನ್ಸ್ ಆಗುತ್ತಿಲ್ಲ. ಬರೀ ಇದಕ್ಕೋಸ್ಕರ ಏತಕ್ಕೆ ಯೂನಿವರ್ಸಿಟಿ ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಶಿವಣ್ಣನವರು ಇತ್ತೀಚೆಗೆ ಮೆಡಿಕಲ್ ಎಜುಕೇಷನ್ ಮಂತ್ರಿಗಳಾಗಿದ್ದಾರೆ ಮೆಡಿಕಲ್ ಎಜುಕೇಷನ್ ಇಂಪ್ರೂವ್ ಮಾಡುವುದಕ್ಕೆ ಮೆಡಿಕಲ್ ಇನ್‌ಫ್ರಾಸ್ಟ್ರಕ್ಚರ್ ಮಾಡುವುದಕ್ಕೆ ಎಷ್ಟೊಂದು ಎಫ್ಫರ್ಟ್ಸ್ ಹಾಕಿದ್ದಾರೆಂಬುದು ನಿಮಗೂ ನಮಗೂ ಗೊತ್ತಿರತಕ್ಕ ವಿಚಾರ. ಆ ದೃಷ್ಟಿಯಲ್ಲಿ ಏನೂ ಪ್ರಯೋಜನವಾಗಲಿಲ್ಲ. ಬರೀ ಯೂನಿವರ್ಸಿಟಿ ಮಾಡುವುದರಿಂದಾಗಿ ನಾವು ಅಕಾಡೆಮಿಕ್ ಸ್ಟ್ಯಾಂಡರ್ಡ್ ಇಂಪ್ರೂವ್ ಮಾಡುತ್ತೇವೆಂದು ನನಗೆ ಅನ್ನಿಸುವುದಿಲ್ಲ. ನಾವು ಹಿಂದೆ ಹಿಂದೆ ಹೋಗುತ್ತಿದ್ದೇವೆ. ನಾವು ಡೀಸೆಂಟ್ರಲೈಸ್ ಮಾಡಬೇಕೆಂದು ಹೇಳಿ ಸೆಂಟ್ರಲೈಸ್ ಮಾಡುವುದಕ್ಕೆ ಹೊರಟಿದ್ದೇವೆ. ನೀವು ಮೈಸೂರಿನಲ್ಲಿ ಮಾಡುತ್ತೀರಿ ನನಗೆ ಗೊತ್ತು. ನೀವು ಮೈಸೂರಿನಲ್ಲಿ ಮಾಡಿ. ಏಕೆಂದರೆ ಮೈಸೂರು

ಜಿಲ್ಲೆಯಲ್ಲಿ ನೀವು ಹೇಳಬೇಕು, ನೋಡಿ ನಾವು ಮೈಸೂರು ಜಿಲ್ಲೆಯಲ್ಲಿ ಇದನ್ನು ಮಾಡಿದ್ದೇವೆಂದು ಹೇಳಬೇಕಾಗುತ್ತದೆ. ಅದರಿಂದ ಏನೂ ಮೈಸೂರು ಜಿಲ್ಲೆಗೆ ಉಪಯೋಗವಾಗುವುದಿಲ್ಲ. ಪಾಪ, ಅವರು ಹೇಳುತ್ತಾರೆ ನಮಗೆ ಏನೋ ಬಂದುಬಿಟ್ಟಿತು ಎಂದು. ನೀವು ಯಾವುದೇ ಸ್ಟ್ಯಾಂಡರ್ಡ್ ತೆಗೆದುಕೊಳ್ಳಿ; ಬೆಂಗಳೂರಿನಲ್ಲಿ 7 ಮೆಡಿಕಲ್ ಕಾಲೇಜುಗಳಿವೆ; ಕೋಲಾರದಲ್ಲಿ ಒಂದು ಮೆಡಿಕಲ್ ಕಾಲೇಜು ಇದೆ. 7 ಮೆಡಿಕಲ್ ಕಾಲೇಜುಗಳು ಬೆಂಗಳೂರಿನ ಸುತ್ತು ಮುತ್ತ ಇವೆ. 26 ಡೆಂಟಲ್ ಕಾಲೇಜುಗಳನ್ನು ನೀವೇ ಕೊಟ್ಟಿದ್ದೀರಿ; ಎಲ್ಲಾ ಬೆಂಗಳೂರಿನಲ್ಲಿವೆ. ಎಲ್ಲಾ ಪೋಸ್ಟ್ ಗ್ರಾಜುಯೇಷನ್ ಇಲ್ಲೇ ಇರತಕ್ಕದ್ದು ಇದನ್ನು ಯಾವ ದೃಷ್ಟಿಯಿಂದ ಮಾಡುತ್ತಿದ್ದೀರಿ? ನೀವು ಮಾಡುತ್ತಿದ್ದೀರಿ, ಮಾಡಿ; ಈಗಲೂ ಕೂಡ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಪುನರಾಲೋಚನೆ ಮಾಡಿ ಬೆಂಗಳೂರಿನಲ್ಲಿ ಇದರ ಕೇಂದ್ರ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಸೆಂಟ್ರಲೈಸೇಷನ್ ಇದೆಯಲ್ಲಾ, ಇದು ನಿಮಗೆ ಹೇಳುತ್ತೇನೆ ನೋಡುತ್ತಾ ಇರಿ, ಇನ್ನು 4-5 ವರ್ಷದೊಳಗೆ ಎಲ್ಲರೂ ಶಾಪ ಹಾಕುತ್ತಾರೆ. ಇನ್ನೊಂದು ಏನು ಕೇಳುತ್ತಾರೆಂದರೆ, ಪ್ಯಾರಲಲ್ ಯೂನಿವರ್ಸಿಟಿಗಳನ್ನು ಕೊಡಿ ಎಂದು. ಮೈಸೂರಿನಲ್ಲಿ ಪ್ಯಾರಲಲ್ ಮೆಡಿಕಲ್ ಯೂನಿವರ್ಸಿಟಿ ಮಾಡಿ, ಬೆಳಗಾಂನಲ್ಲಿ ಪ್ಯಾರಲಲ್ ಮೆಡಿಕಲ್ ಯೂನಿವರ್ಸಿಟಿ ಮಾಡಿ, ಗುಲ್ಬರ್ಗಾದಲ್ಲಿ ಒಂದು ಮಾಡಿ ಎಂದು ಕೇಳುತ್ತಾರೆ. ಈಗಾಗಲೇ ಅಗ್ರಿಕಲ್ಚರಲ್ ಯೂನಿವರ್ಸಿಟಿ ಆಗಿದೆ. ಹೀಗೇ ಮಾಡಿಕೊಂಡು ಹೋದರೆ ನನಗನ್ನಿಸುತ್ತದೆ, ಮೂಗಿಗಿಂತ ಮೂಗುತಿ ಭಾರ ಎಂದು ನಮ್ಮಲ್ಲಿ ಗಾದೆ ಇದೆ, ಹಾಗಾಗುತ್ತದೆ ನೋಡಿ. ಈಗ ನಮ್ಮಲ್ಲಿ ಇಷ್ಟೊಂದು ಜನ ಸೆಕ್ರೆಟರಿಗಳು ಇದ್ದಾರೆ. ಆ ಸೇಕ್ರೆಟರಿಗಳಿಗೆ ಕೆಲಸ ಇಲ್ಲ. ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಕೆಲಸ ಇಲ್ಲ, ಬಹಳ ಕಡಿಮೆ ಕೆಲಸ ಇರತಕ್ಕದ್ದು. ಕೆಳಗಡೆ ಅಧಿಕಾರಿಗಳಿಗೆ ಕೆಲಸಗಳೇ ಇಲ್ಲ. ವಿಭಾಗಾಧಿಕಾರಿಗಳು ಸುಮ್ಮನೆ ಹೆಡ್‌ಕ್ವಾರ್ಟರ್‌ಗಳು ಇದ್ದ ಹಾಗೆ. ಚೀಫ್ ಇಂಜಿನಿಯರ್‌ಗಳು ಕೂಡ ಅಷ್ಟೆ ನನಗೆ ಇದು ಅರ್ಥವಾಗುವುದಿಲ್ಲ. ಎಷ್ಟು ಜನರನ್ನು ಹೀಗೆ ನೇಮಕ ಮಾಡಿಕೊಂಡು ಕುಳಿತುಕೊಳ್ಳಬೇಕೆಂದು ಇದ್ದೀರಿ? ಎಷ್ಟು ಜನ ವೈಸ್ ಛಾನ್ಸಲರ್‌ಗಳು ಬೇಕು, ಎಷ್ಟು ಜನ ರಿಜಿಸ್ಟ್ರಾರ್‌ಗಳು ಬೇಕು? ಜನಗಳಿಗೆ ಕನ್‌ವಿನ್ಸ್ ಮಾಡಿ. ಇದಕ್ಕೆ ಕೊನೇಪಕ್ಷ 4-5 ಕೋಟಿ ರೂಪಾಯಿಗಳಾದರು ಪ್ರತಿ ವರ್ಷ ಖರ್ಚಾಗುತ್ತದೆ. ಈಗ ಏನು ಖರ್ಚಾಗುತ್ತಿದೆ ಅದರ ಮೇಲೆ 3 ಕೋಟಿ ರೂಪಾಯಿಗಳಷ್ಟು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಇದು ಅನಾವಶ್ಯಕ ಹೊರೆ. ಇದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ನಾನು ಮುಕ್ತ ವಿಶ್ವವಿದ್ಯಾನಿಲಯವನ್ನು ಅರ್ಥ ಮಾಡಿಕೊಳ್ಳಬಲ್ಲೆ. ಅದು ಪ್ರತ್ಯೇಕ ಕಾನ್‌ಸೆಪ್ಟ್ ಅದಕ್ಕೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ ಏನೂ ಇಲ್ಲ. ಒಂದು ಕಡೆ ನಾವು ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇವೆ. ಯಾವ ದೃಷ್ಟಿಯಿಂದ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡುತ್ತಿದ್ದೇವೆ? ನೀವು ಈ ಜಾಗದಲ್ಲಿ 3 ಜನ ಕುಳಿತುಕೊಂಡು ಎಲ್ಲರೂ ಭಾಷಣ ಮಾಡಿದ್ದು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡುತ್ತೇವೆ ಎಂದು. ಕೊನೆಯ ದಿನ ನಾವು ಹೋಗುವಾಗ ಏನು ಮಾಡುತ್ತಿದ್ದೇವೆಂದರೆ, ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್(ನಾನ್ ಡೆವಲಪ್‌ಮೆಂಟ್ ಅಂದರೂ ಒಂದೆ, ನಾನ್ ಪ್ಲಾನ್ ಅಂದರೂ

ಒಂದೆ) ಅಥವಾ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಎಂದು ಕರೆಯಿರಿ; ಎಕ್ಸ್‌ಪೆಂಡಿಚರ್ ಅನ್ನು ಜಾಸ್ತಿ ಮಾಡುತ್ತಿದ್ದೇವೆ. ಇದು ನನಗೆ ಇನ್ನೂ ಕನ್‌ವಿನ್ಸ್ ಆಗಿಲ್ಲ. ಸಾಧ್ಯವಾದರೆ ನನಗೆ ಅಂದರೆ ರಾಜ್ಯದ ಜನತೆಗೆ ಇದರ ಬಗ್ಗೆ ನಂಬಿಕೆ ಬರುವ ಹಾಗೆ ಹೇಳುವುದು ಒಳ್ಳೆಯದು.

ಶ್ರೀ ಕೆ.ಹರ್ಷಕುಮಾರ ಗೌಡ (ಚಾಮರಾಜ) :- ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮೈಸೂರಿನಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯ ಆಗಬೇಕೆಂಬುದರ ಬಗ್ಗೆ ಆಕ್ಷೇಪಣೆ ಎತ್ತಿದ್ದಾರೆ.

ಶ್ರೀ ಪಿ.ಬಿ.ಆರ್.ಸಿಂಧ್ಯ:- ನೀವು ಮಿಸ್‌ಲೀಡ್ ಮಾಡಬೇಡಿ. ನಾವು ಏನು ಮಾತನಾಡಿದರೂ ರೆಕಾರ್ಡ್‌ನಲ್ಲಿ ಹೋಗುತ್ತದೆ. ನಾಳೆ ಮೈಸೂರಿನಲ್ಲಿ ಹೋದರೆ ಜನರು ನನ್ನನ್ನು ಕೇಳುತ್ತಾರೆ, ಏಕಪ್ಪ ನೀನು ರಾಜಕೀಯ ಮಾಡುವುದಕ್ಕೆ ಬಂದಿದ್ದಿಯಾ ಎಂದು;

ಶ್ರೀ ಕೆ.ಹರ್ಷಕುಮಾರ ಗೌಡ:- ಆ ರೀತಿ ರಾಜಕೀಯ ಮಾಡುವುದಿಲ್ಲ ನಾವು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೈಸೂರು ನಗರದ ಪ್ರತಿನಿಧಿಯಾಗಿ ನಾನು ಮಾತನಾಡದೆ ಇದ್ದರೆ ಪರೋಕ್ಷವಾಗಿ ನಿಮಗೆ ಬೆಂಬಲ ಕೊಟ್ಟ ಹಾಗೆ ಆಗುತ್ತದೆಂದು ನಾನು ಎದ್ದುನಿಂತು ಮಾತನಾಡಬೇಕಾಗಿ ಬಂದಿದೆ. ಮೈಸೂರು ನಗರಕ್ಕೆ ಒಂದು ಇತಿಹಾಸ ಇದೆ, ತನ್ನದೇ ಆದ ಚರಿತ್ರೆ ಇದೆ: ಪರಂಪರೆ ಇದೆ. ಅದು ಒಂದು ಶೈಕ್ಷಣಿಕ ಕೇಂದ್ರ. ಸಿಂಧ್ಯಾಜೀ, ಮೈಸೂರಿನ ವೈಶಿಷ್ಟ್ಯ ಏನು ಎಂದು ತಮಗೂ ಗೊತ್ತಿದೆ ಅದೊಂದು ಶೈಕ್ಷಣಿಕಕೇಂದ್ರ.

ಶ್ರೀ ವಾಟಾಳ್ ನಾಗರಾಜ್:- ಆ ಇತಿಹಾಸ ಪರಂಪರೆ ಇರುವುದಕ್ಕೇ ವೈರ್‌ಲೆಸ್ ಸೆಟ್ ಇಟ್ಟುಕೊಂಡಿರುವುದು.

ಶ್ರೀ ಕೆ.ಹರ್ಷಕುಮಾರ ಗೌಡ:- ಮೈಸೂರು ನಗರಕ್ಕೆ ಶೈಕ್ಷಣಿಕ ವಾತಾವರಣ ಇದೆ ಅದರಿಂದ ನಮಗೆ ಜಾಗ ಕೊಡುವುದಕ್ಕೆ ಶಕ್ತಿ ಇದೆ. ಬೆಂಗಳೂರಿನಲ್ಲಿ ಒತ್ತಡದ ಮಧ್ಯೆ ಒಂದು ಫೋನ್ ಮಾಡಿದರೆ ಅಧಿಕಾರಿಗಳು ಸಿಗದೆ ಇರುವ, ರಿಜಿಸ್ಟ್ರಾರ್ ಅವರು ಸಿಗದೆ ಇರುವ ವ್ಯವಸ್ಥೆಯನ್ನು ಬೆಂಗಳೂರು ನಗರದಲ್ಲಿ ನಾವು ಕಾಣುತ್ತಿದ್ದೇವೆ. ಇವತ್ತು ರಾಜ್ಯದಿಂದ ಮೈಸೂರಿಗೆ ಬರುವುದಕ್ಕೆ ಎಲ್ಲಾ ವ್ಯವಸ್ಥೆ ಇದೆ. ಮೈಸೂರು ನಗರದಲ್ಲಿ ಆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕೆ ಎಲ್ಲಾರೀತಿಯ ಒಳ್ಳೆಯ ವಾತಾವರಣ ಇದೆ. ಆದುದರಿಂದ ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

* ಶ್ರೀ ಸಿ.ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ ನನ್ನ ಸ್ನೇಹಿತರು ಕೆಲವರು ಕೆಲವು ವಿಚಾರಗಳನ್ನು ಕುರಿತು ಏನು ಮಾತನಾಡಿದ್ದಾರೆ ಅದನ್ನೇ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ದೇಶದಲ್ಲಿ ಕ್ಯಾಪಿಟೇಷನ್ ಫೀ ಬಗ್ಗೆ ಬಹಳ ತೀವ್ರವಾದ ಚರ್ಚೆ ನಡೆಯುತ್ತಿದೆ. ಅದರಲ್ಲೂ ಕೂಡ ವೈದ್ಯಕೀಯ ವಿದ್ಯಾಭ್ಯಾಸದಲ್ಲಿ ಇರತಕ್ಕ ಕ್ಯಾಪಿಟೇಷನ್ ಬಗ್ಗೆ ಸಾಕಷ್ಟು ಇವತ್ತು ಈ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಒಂದು ಕಡೆ ಇದನ್ನು ನಾವು ತೆಗೆದುಹಾಕಬೇಕೆಂಬ ಪ್ರಯತ್ನ ಎಷ್ಟು ತೀವ್ರವಾಗಿ

ನಡೆಯುತ್ತಿದೆಯೋ ಅಷ್ಟೇ ತೀವ್ರವಾಗಿ ಅದನ್ನು ಮರೆಮಾಚತಕ್ಕ ಪ್ರಯತ್ನ ನಡೆಯುತ್ತಿದೆ. ಹೊಸ ಕಾನ್‌ಸೆಪ್ಟ್ ಈ ಕ್ಯಾಪಿಟೇಷನ್ ಶುಲ್ಕದಿಂದ ತಪ್ಪಿಸಿ ಕೊಳ್ಳಬೇಕೆಂಬ ಪ್ರಯತ್ನ ನಡೆಯುತ್ತಿದೆ. ಅದೇನೆಂದರೆ, ಡೀಮೆಂಡ ಯೂನಿವರ್ಸಿಟಿ ಎಂಬ ಸ್ಟೇಟಸ್ ಅನ್ನು ಕೆಲವು ಮೆಡಿಕಲ್ ಕಾಲೇಜಿನವರು ಪಡೆಯುತ್ತಿರತಕ್ಕದ್ದು ನಾವು ನೋಡಿದ್ದೇವೆ. ಇದು ಯೂನಿವರ್ಸಿಟಿ ಆಗುವ ಕಾರಣಕ್ಕೋಸ್ಕರ ಸೀಟು ಶುಲ್ಕ ಏನಿದೆ, ಆ ಕಾನೂನಿಗೆ ನಾವು ಹೊರತಾಗಿದ್ದೇವೆಂಬ ವಾದವನ್ನು ಇವತ್ತಿನ ದಿವಸ ಕೆಲವರು ಮಂಡಿಸಿದ್ದಾರೆ. ಅದರಿಂದ ನಮ್ಮ ಸರ್ಕಾರಕ್ಕೂ ಕೂಡ ಅಂಥ ಒಂದು ಸಮಸ್ಯೆಯಿಂದ ಜಂಜಾಟ ನಡೆಯುತ್ತಿರತಕ್ಕದ್ದು ಸಹ ಉಂಟಾಗಿದೆ. ಈ ಕಾನೂನು ತರತಕ್ಕದ್ದರಲ್ಲಿ ತಮಗೆ ಅನುಭವ ಇದೆ. ಉಡುಪಿಯಲ್ಲಿರತಕ್ಕ ಮಣಿಪಾಲ್ ಮೆಡಿಕಲ್ ಕಾಲೇಜ್ ಡೀಮ್ಡ್ ಯೂನಿವರ್ಸಿಟಿ ಎಂದು ಮಾಡಿಕೊಂಡು ನಿಮ್ಮ ಕಾನೂನು ಲಾಭವಾಗುವುದಿಲ್ಲವೆಂದು ಹೇಳಿಕೊಳ್ಳುತಿದ್ದಾರೆ. ಇದರಿಂದ ನಾವೂ ಎಷ್ಟು ಬೇಕಾದರೂ ಜನರನ್ನು ಸುಲಿಗೆ ಮಾಡ ಬಹುದೆಂಬ ರೀತಿಯಲ್ಲಿದೆ. ಅದು ಡೀಮ್ಡ್ ಯೂನಿವರ್ಸಿಟಿ ಆದರೆ ಅವರಿಗೆ ಕ್ಯಾಪಿಟೇಷನ್ ಕಾನೂನು ಲಾಬವಾಗುವುದಿಲ್ಲ. ಇತ್ತೀಚೆಗೆ ಕೋಲಾರದಲ್ಲಿ, ಬೆಂಗಳೂರಿನಲ್ಲಿ ಆಗಿರತಕ್ಕ ಮೆಡಿಕಲ್ ಕಾಲೇಜುಗಳು ಇನ್ನೂ ಶೈಶವಾವಸ್ಥೆಯಲ್ಲಿವೆ. ಅಲ್ಲಿ ಒಂದು ಇದ್ದರೆ ಒಂದು ಇಲ್ಲ. ಅಲ್ಲಿ ಅಭಿವೃದ್ಧಿಪಡಿಸಬೇಕೆಂದರೆ ಇವತ್ತು ಅದಕ್ಕೆ ಇಲ್ಲದೆ ಇರತಕ್ಕ ಕಾನೂನುಗಳನ್ನೆಲ್ಲ ಜಾರಿಗೆ ತರುತ್ತಿದ್ದೀರಿ. ಆದರೆ ಚಾಪೆ ಕೆಳಗಡೆ ತೂರತಕ್ಕ ರಂಗೋಲೆ ಕೆಳಗಡೆ ತೊರತಕ್ಕ ಸಂಸ್ಥೆಗಳು ಏನಿವೆ, ಅವಕ್ಕೆ ಏನಿದೆ ಇದರಲ್ಲಿ ಪರಿಹಾರ? ಅವರಿಗೆ ಕಾನೂನನ್ನು ಜಾರಿಗೆ ಮಾಡತಕ್ಕದ್ದು, ಕಾನೂನಿನ ವಿಧಿಯಲ್ಲಿ ಅವರೂ ಕೊಡ ಬರಬೇಕಾದುದಕ್ಕೆ ಏನು ಪರಿಹಾರ ಇದೆ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕಾಗುತ್ತದೆ. ಒಂದುಕಡೆ ಬಿಟ್ಟು ಒಂದು ಕಡೆ ನೀವು ತಡೆಯುವುದು ಸರಿಯಲ್ಲ. ಶರಾವತಿಯಲ್ಲಿ ಫ್ಲಡ್ ಗೇಟ್ ಎಂದು ಏನು ಇಟ್ಟಿದ್ದಾರೆ ಆ ಗೇಟ್‌ಗಳನ್ನು ಓಪನ್ ಮಾಡಿ ಅದನ್ನು ಹಾಗೇ ಬಿಟ್ಟು ಅಪ್ಪಿತಪ್ಪಿ ಇಲ್ಲಿ ಒಂದು ಕಡೆ ಬಂದಿರತಕ್ಕ ಕಾಲೇಜುಗಳ ಮೇಲೆ ಕಲ್ಲು ಬಂಡೆ ಹೇರತಕ್ಕ ಪ್ರಯತ್ನ ಏನು ನಡೆಯುತ್ತಿದೆ, ಇದನ್ನು ತಡೆಗಟ್ಟಬೇಕಾಗಿರುತ್ತದೆ. ಮೊದಲನೆಯ ಸಾರಿ ಸಿದ್ಧವೀರಪ್ಪನವರು ಇದೇ ಸದನದಲ್ಲಿ ಮಸೂದೆಯನ್ನು ಮಂಡಿಸಿದಾಗ ನಾವು ಸದಸ್ಯರಾಗಿದ್ದೆವು ಮತ್ತು ನಾವು ಚರ್ಚೆಯಲ್ಲಿ ಭಾಗ ವಹಿಸಿದ್ದೆವು. ಸಿದ್ಧವೀರಪ್ಪನವರು ಏನು ಕಾನ್‌ಸೆಪ್ಟ್ ಇಟ್ಟುಕೊಂಡು ಈ ಬಿಲ್ಲನ್ನು ಮಂಡನೆ ಮಾಡಿದ್ದರು ಆ ಕಾನಸೆಪ್ಟ್ ಇವತ್ತು ಇಲ್ಲ; ಸಂಪೂರ್ಣ ಬದಲಾವಣೆಯಾಗಿದೆ. ಅದನ್ನು ದಯವಿಟ್ಟು ತಾವು ಹೇಳಬೇಕಾಗುತ್ತದೆ. ಚಾಪೆ ಕೆಳಗಡೆ, ರಂಗೋಲೆ ಕೆಳಗಡೆ ತೂರತಕ್ಕ ಪ್ರಯತ್ನ ಏನು ನಡೆಯುತ್ತಿದೆ, ಅದನ್ನು ನಿಲ್ಲಿಸುತ್ತೇವೆಂದು ನಿಮಗೆ ತಾಕತ್ತು ಇದ್ದರೆ ನೀವು ಹೇಳಿ. ಇಲ್ಲದಿದ್ದರೆ ಶರಾವತಿಯಲ್ಲಿ ಫ್ಲಡ್ ಗೇಟ್ ಓಪನ್ ಮಾಡುತ್ತೇವೆಂಬ ಮಾತನ್ನು ಹೇಳಿ. ಎರಡರ ಪೈಕಿ ಒಂದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷಪೀಠದಲ್ಲಿದ್ದರು.)

Dr.N.B.Nanjappa (Shravana Belagola):-As a doctor, I welcome this Medical University Bill.

ಮೆಡಿಕಲ್ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡತಕ್ಕ ಸಮಯದಲ್ಲಿ ಅದರ ಲೊಕೇಷನ್ ಮತ್ತು ಅದರ ಅಕ್ಟಿವಿಟೀಸ್, ಏಕೆಂದರೆ ಇವತ್ತು ಮೆಡಿಕಲ್ ಡಿಪಾರ್ಟ್‌ಮೆಂಟ್ ಬೃಹದಾಕಾರವಾಗಿ ಬೆಳೆದಿರುವುದರಿಂದ, ಅದು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಇದರಲ್ಲಿ ಬರುತ್ತಾ ಇರುವುದರಿಂದ ಇದನ್ನು ಸಪರೇಟ್ ಮಾಡುವ ವ್ಯವಸ್ಥೆ ಬಂದಿರುವುದು ಕರ್ನಾಟಕ ರಾಜ್ಯಕ್ಕೆ ನಿಜವಾಗಿಯೂ ಒಂದು ದೊಡ್ಡ ಕೊಡುಗೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಂದಿರುವುದನ್ನು ನಾವೆಲ್ಲರೂ ಕೂಡ ಸ್ವಾಗತ ಮಾಡುತ್ತೇವೆ. ಅದನ್ನು ಲೊಕೇಟ್ ಮಾಡತಕ್ಕ ಸಂದರ್ಭದಲ್ಲಿ ಯಾವೂದೇ ಪೊಲಿಟಿಕಲ್ ಇಂಟರ್‌ಫಿಯರೆನ್ಸ್ ಇಲ್ಲದೆ ಒಳ್ಳೆಯ ಉತ್ತಮವಾದ, ಎಲ್ಲರಿಗೂ ಕರ್ನಾಟಕ ರಾಜ್ಯದಲ್ಲಿ ಸೌಲಭ್ಯ ಸಿಗತಕ್ಕ ಮತ್ತು ಅದನ್ನು ಬಹಳ ಚೆನ್ನಾಗಿ ಮಾಡತಕ್ಕ ವ್ಯವಸ್ಥೆಯ ಆಧಾರದ ಮೇಲೆ ಮೆಡಿಕಲ್ ಯೂನಿವರ್ಸಿಟಿಯನ್ನು ತಾವು ಮಾಡಬೇಕೆಂಬ ಮನವಿಯನ್ನು ತಮ್ಮ ಮೂಲಕ ನಾವು ಸರ್ಕಾರಕ್ಕೆ ಸಲ್ಲಿಸುತ್ತೇನೆ. ಮತ್ತು ಅದು ಸ್ವಾಯತ್ತ ಯೋಜನೆ ಏನಿದೆಯೋ ಅದು ಬಹಳ ಚೆನ್ನಾಗಿ ಆಗಬೇಕಾದುದು, ಮುಖ್ಯ ಆಗ ಎಲ್ಲರೂ ಕೂಡ ಅದನ್ನು ಅಭಿನಂದಿಸುತ್ತಾರೆ ಎಂದು ನಾನಾದರೂ ಕೂಡ ತಿಳಿದುಕೊಂಡಿದ್ದೇನೆ. ಅದನ್ನು ಮಂತ್ರಿಗಳು ಮನಸ್ಸಿನಲ್ಲಿ ಇಟ್ಟುಕೊಂಡು ಬಹಳ ಚೆನ್ನಾಗಿರುವ ಕಡೆ ಸಾಕಷ್ಟು ಜಮೀನನ್ನು ಮತ್ತು ಹಣವನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿ it must become one of the beautiful universities. It is one of its kind.

ಆ ತರಹದ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ಮೈಸೂರು ವಿಶ್ವವಿದ್ಯಾನಿಲಯ ಏನು ಒಳ್ಳೆಯ ಹೆಸರು ತೆಗೆದುಕೊಂಡಿದೆಯೋ ಆ ದಿಸೆಯಲ್ಲಿ ತಾವು ಗಮನ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಹೇಳಿ ನಾನು ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಹಾಗೂ ನಮ್ಮ ಮಾನ್ಯ ಮುಖ್ಯಮಂತ್ರಿಯವರನ್ನು ಕೂಡ ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ.

ಡಾ.ವೈ.ನಾಗಪ್ಪ (ಹರಿಹರ):- ಸನ್ಮಾನ್ಯ ಸಭಾಧ್ಯಕ್ಷರೇ, ವೈದ್ಯಕೀಯ ವಿಶ್ವವಿದ್ಯಾನಿಲಯ ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡುತ್ತಾ ಇರುವ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಒಂದು ಮಾತ್ರ ಹೇಳುತ್ತೇನೆ. ಈ ವಿಶ್ವವಿದ್ಯಾನಿಲಯವನ್ನು ಇವತ್ತು ಬೆಂಗಳೂರಿನಲ್ಲಿ ತೆಗೆಯಲಿಕ್ಕೆ ನನ್ನ ಅತ್ಯಂತ ವಿರೋಧ ಇದೆ. ಏಕೆಂದರೆ ಈಗ ಬೆಂಗಳೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಇದೆ. ಮೈಸೂರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇದೆ. ಗುಲ್ಬರ್ಗದಲ್ಲಿ ವಿಶ್ವವಿದ್ಯಾನಿಲಯ ಇದೆ. ಕುವೆಂಪು ವಿಶ್ವವಿದ್ಯಾನಿಲಯ ಇದೆ. ಆದರೆ ದಾವಣಗೆರೆಯಲ್ಲಿ ಸಾಕಷ್ಟು ವಿದ್ಯಾಸಂಸ್ಥೆಗಳಿವೆ. ಅಲ್ಲಿ ಏತಕ್ಕೆ ಕೊಡಬಾರದು? ಅದು ಬೆಳೆಯುತ್ತಿರುವ ನಗರ. ಗುಲ್ಬರ್ಗ ಮತ್ತು ಬೆಂಗಳೂರಿಗೆ ಮಧ್ಯದಲ್ಲಿದೆ. ಇದು Heart of the state ಆಗುತ್ತದೆ, ಆ ದೃಷ್ಟಿಯಲ್ಲಿ ದಾವಣಗೆರೆಯಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯ ತೆರೆಯಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ನಿವೇದಿಸಿಕೊಳ್ಳುತ್ತಿದ್ದೇವೆ. ನಮ್ಮ ಜಿಲ್ಲಾ ಮಂತ್ರಿಗಳಿದ್ದಾರೆ. ಅವರು ಇದರ ಬಗ್ಗೆ ಮಾತನಾಡುತ್ತಾರೆಂದು ನನಗೆ ನಂಬಿಕೆ ಇದೆ. ದಯಮಾಡಿ ಪುನ: ಬೆಂಗಳೂರಿಗೆ ಕೊಟ್ಟರೆ ಮಲತಾಯಿಧೋರಣೆ ತೋರಿಸಿದಂತಾಗುತ್ತದೆ. It is a growing city and there are so many educational insititutions and

there are two medical colleges and one dental college and we have got a plenty of land and if you want donations, there are plenty of donors. You can collect crores of rupees from the donors. I plead on behalf of Davanagere, as legislator of Harihar, the neighbourer of Davanagere I humbly request through the Hon'ble Speaker to establish the medical University at Davanagere. I hope the Hon'ble Minister will listen to the request of the legislators.

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಮಂತ್ರಿಗಳು):-

ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಅತೀ ಅಧುನಿಕ ವೈದ್ಯ ಪದ್ಧತಿ ಹಾಗೂ ಭಾರತೀಯ ವೈದ್ಯ ಪದ್ಧತಿ ತರಬೇತಿ, ಬೋಧನೆ, ಸಂಶೋಧನೆ ಹೀಗೆ ನಾನಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಒಂದು ಕಮಿಟಿ ಮಾಡಿತ್ತು ಎಂದು ಹೇಳಿದ್ದೆ. ಆ ಕಮಿಟಿಯಲ್ಲಿ ಡಾ:ನರಸಿಂಹಯ್ಯನವರು ಇದ್ದರು. ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟರು. ಯೂನಿವರ್ಸಿಟಿ ಆಗಲೇ ಬೇಕು ಎಂದು ಹೇಳಿದರು. ಅದೇಪ್ರಕಾರ ನವನೀತಂ ಅವರೂಕೂಡ ಮೂರು ಸಲಹೆಗಳನ್ನು ಕೊಟ್ಟರು. ಟೆಕ್ನಿಕಲ್ ಯೂನಿವರ್ಸಿಟಿ ಆಗಬೇಕು, ಅಂಬೇಡ್ಕರ್ ಹೆಸರಿನಲ್ಲಿ ಓಪನ್ ಯೂನಿವರ್ಸಿಟಿ ಆಗಬೇಕು ಮತ್ತು ಹೆಲ್ತ್ ಯೂನಿವರ್ಸಿಟಿ ಆಗಬೇಕೆಂದು ಹೇಳಿದ್ದರು. ಆ ಸಲಹೆಯ ಮೇರೆಗೆ ಮುಖ್ಯಮಂತ್ರಿಗಳು 1994 ರ ಆಯವ್ಯಯ ಭಾಷಣದಲ್ಲಿ ಹೇಳಿದ್ದರು. ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಆಗಬೇಕೆಂದು ಹೇಳಿದ ಪ್ರಕಾರ ನಾವು ಇವತ್ತು ಈ ವಿಧೇಯಕವನ್ನು ತಂದಿದ್ದೇವೆ. ಈ ವಿಶ್ವವಿದ್ಯಾನಿಲಯ ಮೈಸೂರಿನಲ್ಲೇ ಏಕೆ ಎಂದು ಸಿಂಧ್ಯಾ ಅವರು ಕೇಳಿದರು. ರೀಜನಲ್ ಸೆಂಟರ್‌ಗಳನ್ನು ನಾವು ಎಲ್ಲಿ ಬೇಕಾದರೂ ಮಾಡಬಹುದು ಎಂದು ಪ್ರಾವಿಷನ್ ಇದೆ ನಾನು ತಮಗೆ ಮೊದಲೇ ಹೇಳಿದ ಪ್ರಕಾರ ಬೆಂಗಳೂರಿನಲ್ಲಿ ಬಹಳಷ್ಟು ಕಾಲೇಜುಗಳು ಬೆಳೆದಿದೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲೇ ಸುಮಾರು 200 ಕ್ಕಿಂತಲೂ ಹೆಚ್ಚು ಕಾಲೇಜುಗಳು ಅಸ್ತಿತ್ವದಲ್ಲಿ ಇವೆ. ಅದರಲ್ಲಿ 92 ಕಾಲೇಜುಗಳು ಡೆಂಟಲ್, ಮೆಡಿಕಲ್ ಹಾಗೂ ಫಾರ್ಮಸಿಗೆ ಸಂಬಂಧಪಟ್ಟಹಾಗೆ ಹೊರಗೆ ಬಂದು ಮೆಡಿಕಲ್ ಹೆಲ್ತ್ ಯೂನಿವರ್ಸಿಟಿಗೆ ಬಂದು ಬಿಡುತ್ತದೆ ಅಂತಹ ಕಾಲಕ್ಕೆ ಡೀಸೆಂಟ್ರಲೈಸೇಷನ್ ಕೂಡ ಮಾಡುತ್ತೇವೆ.

Sri P.G.R. Sindhia :- You are not adding any college. It is only an administrative office where the Vice-Chancellor will be there.

ಶ್ರೀ. ಬಿ.ಶಿವಣ್ಣ :- ರೀಸರ್ಚ್ ಮಾಡಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ :- ಈ ಬಿಲ್‌ನಲ್ಲಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್‌ಸಸ್ ಚಂಡೀಘರ್, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್‌ಸಸ್ ಬೆಂಗಳೂರು- ಆ ರೀತಿ ನಾವು ಕೆ.ಆರ್.ಆಸ್ಪತ್ರೆಯನ್ನು ಇಂಪ್ರೂವ್ ಮಾಡಿ ಸೂಪರ್

ಸ್ಪೆಷಲೈಸೇಷನ್ ಆಸ್ಪತ್ರೆಗಳನ್ನು ನಾವು ಮೈಸೂರಿನಲ್ಲಿ ಮಾಡಿ ಅದನ್ನು ಒಂದು ಎಜ್ಯುಕೇಷನ್ ಸೆಂಟರ್ ಮಾಡಿ ಅದಕ್ಕೆ ಯೂನಿವರ್ಸಿಟಿ ಸ್ಟೇಟಸ್ ಕೊಡುತ್ತಿದ್ದೇವೆ ಎಂದು ತಾವು ಹೇಳಿದ್ದರೆ ನಾನು ಇದನ್ನು ಅರ್ಥ ಮಾಡಿಕೊಳ್ಳಬಹುದಾಗಿತ್ತು. ನೀವು ಮಾಡಿರತಕ್ಕದ್ದು ಏನೂ ಇಲ್ಲ. ಈಗಿರತಕ್ಕ ಕಾಲೇಜುಗಳು, ಆಸ್ಪತ್ರೆಗಳು ಹಾಗೇ ಇರುತ್ತವೆ. ಒಂದು ಹೆಸರು ಇಡುತ್ತಿದ್ದೀರಿ, ಒಂದು ಬೋರ್ಡ್ ಹಾಕುತ್ತಿದ್ದೀರಿ, ಮತ್ತು ವೈಸ್‌ಛಾನ್ಸಲರ್ ಆಗಿ ಒಬ್ಬರನ್ನು ಅಪಾಯಿಂಟ್ ಮಾಡುತ್ತೀರಿ ಅಷ್ಟೇ.

(ಉಪಾಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಶ್ರೀ ಬಿ. ಶಿವಣ್ಣ :- ಮಾನ್ಯ ಸಿಂಧ್ಯಾ ಅವರಿಗೆ ಒಂದು ವಿಚಾರ ಹೇಳಬಯಸುತ್ತೇನೆ. ಭಾರತ ಸರ್ಕಾರದ ಆದೇಶದ ಮೇರೆಗೆ ಎಲ್ಲಾ ರಾಜ್ಯ ಸರ್ಕಾರಗಳು ಒಂದೊಂದು ಹೆಲ್ತ್ ಯೂನಿವರ್ಸಿಟಿ ಮಾಡಬೇಕು ಎಂದ ಕಾರಣ ಕರ್ನಾಟಕ ಸರ್ಕಾರ ಈ ಬಗ್ಗೆ ಕ್ರಮಕೈಗೊಂಡಿದೆ.

ಶ್ರೀ ಆರ್.ವಿ.ದೇಶಪಾಂಡೆ :- ಮಾನ್ಯ ಶಿವಣ್ಣನವರು ಅಸ್ಸ್ಯೂರಜಿ ಹೇಳುವ ಒಂದು ಹಾಬಿ ಇಟ್ಟುಕೊಂಡಿದ್ದಾರೆ. ಇದರ ಪರಿಸ್ಥಿತಿ ಏನಾಗುತ್ತದೆ ಎಂದು ಅಸ್ಸ್ಯೂರಜಿ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ :- ಅಪರೂಪಕ್ಕೆ ಶಿವಣ್ಣನವರು ಒಂದು ಮಸೂದೆ ತಂದಿದ್ದಾರೆ. ಅದನ್ನು ಪಾಸ್ ಮಾಡಿಕೊಳ್ಳಿ ಸ್ವಾಮಿ.

ಶ್ರೀ ಬಿ. ಶಿವಣ್ಣ : ಮಣಿಪಾಲ್ ಸಂಸ್ಥೆಗೆ ಡೀಮ್ಡ್ ಯೂನಿವರ್ಸಿಟಿ ಎಂದು ಯುನಿವರ್ಸಿಟಿಯವರು ಹಾಗೂ ಯುಜಿಸಿ ಅವರು ಹೇಳಿದರು. ಅದು ಡೀಮ್ಡ್ ಯೂನಿವರ್ಸಿಟಿ ಆದರೂ ಕೂಡ ಮಣಿಪಾಲ್ ಮೆಡಿಕಲ್‌ಕಾಲೇಜು ಏನಿದೆ ಅದರ ಬಗ್ಗೆ ಸರ್ಕಾರಕ್ಕೆ ಅಧಿಕಾರ ಇದೆ ಎಂದು ನಮ್ಮ ಒಪೀನಿಯನ್ ಇದೆ. ಆದರೆ ಹೈಕೋರ್ಟಿನಲ್ಲಿ ಕೇಸ್ ಇರುವ ಕಾರಣ ಹೆಚ್ಚು ಹೇಳುವುದು ಬೇಡ ; ಹೇಳಿದರೆ ಸಬ್‌ಜ್ಯುಡೀಸ್ ಆಗುತ್ತದೆ. ಒಟ್ಟಿನಲ್ಲಿ ಈ ಒಂದು ಪ್ರೋಗ್ರೆಸೀವ್ ಬಿಲ್ ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ : ಎನ್.ಬಿ. ನಂಜಪ್ಪ :- ಯಾವುದೇ ವಿಶ್ವವಿದ್ಯಾನಿಲಯ ಪ್ರಥಮವಾಗಿ ಪ್ರಾರಂಭವಾಗಬೇಕಾದರೆ ಅದರ ಮೊದಲ ಯೂನಿವರ್ಸಿಟಿ ಆಫೀಸ್ ವೈಸ್‌ಛಾನ್ಸಲರ್‌ರಿಂದಲೇ ಪ್ರಾರಂಭ ಆಗುತ್ತದೆ. ಅದು ಬೆಳೆಯುವುದಕ್ಕೆ ಬಹಳಷ್ಟು ದಿವಸ ಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅದನ್ನು ಇಲ್ಲಿ....

ಶ್ರೀ ಬಸವರಾಜ ರಾಯರೆಡ್ಡಿ :- ಒಳ್ಳೆಯ ಕೆಲಸ ಆಯಿತಲ್ಲಾ? ನೀವು ಬಿಲ್ ಪಾಸ್ ಮಾಡಿಕೊಳ್ಳಿ.

ಉಪಾಧ್ಯಕ್ಷರು :- ಅವರು ಉತ್ತರ ಕೊಟ್ಟಿದ್ದಾರೆ ತಾವು ಕುಳಿತುಕೊಳ್ಳಿ.

Dr.N.B.Nanjappa :- Why are you so jealous about it?

ಶ್ರೀ ಬಸವರಾಜ ರಾಯರೆಡ್ಡಿ :- ವಿಧೇಯಕ ಬೇಗ ಪಾಸ್ ಮಾಡಿ. ಇಲ್ಲಿ ಇನ್ನೂ ಬೇರೆಬೇರೆ ವಿಷಯಗಳು ಇವೆ.

ಶ್ರೀ ಬಿ.ಶಿವಣ್ಣ :- ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಎನೆಂದರೆ '' 1994 ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಉಪಾಧ್ಯಕ್ಷರು :- '' ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ಕ್ಕೆ ತಿದ್ದುಪಡಿ:-

ಶ್ರೀ ಬಿ. ಶಿವಣ್ಣ :- (ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ಖಂಡ 4ಕ್ಕೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಸದರಿ ವಿಧೇಯಕದ ಖಂಡ 4ರಲ್ಲಿ ಇತರ ಸ್ಥಳಗಳಲ್ಲಿ'' ಎಂಬ ಪದಗಳ ತರುವಾಯ ''ಸರ್ಕಾರದ ಪೂರ್ವಾನುಮತಿಯೊಂದಿಗೆ ಎಂಬ ಪದಗಳನ್ನು ಸೇರಿಸತಕ್ಕದ್ದು.''

ಉಪಾಧ್ಯಾಕ್ಷರು:- ಪ್ರಸ್ತಾಪ ಏನೆಂದರೆ :

''ಸದರಿ ವಿಧೇಯಕದ ಖಂಡ 4ರಲ್ಲಿ ಇತರ ಸ್ಥಳಗಳಲ್ಲಿ'' ಎಂಬ ಪದಗಳ ತರುವಾಯ ''ಸರ್ಕಾರದ ಪೂರ್ವಾನುಮತಿಯೊಂದಿಗೆ '' ಎಂಬ ಪದಗಳನ್ನು ಸೇರಿಸತಕ್ಕದ್ದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 4 ತಿದ್ದುಪಡಿಯೊಂದಿಗೆ:

ಉಪಾಧ್ಯಕ್ಷರು:- ಪ್ರಸ್ತಾಪ ಏನೆಂದರೆ:

''ಖಂಡ 4 ತಿದ್ದುಪಡಿಯೊಂದಿಗೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 4 ತಿದ್ದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 5 ರಿಂದ 44 :-

ಉಪಾಧ್ಯಕ್ಷರು :- ''ಖಂಡ 5ರಿಂದ 44ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 5 ರಿಂದ 44ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 45ಕ್ಕೆ ತಿದ್ದುಪಡಿ :

ಶ್ರೀ ಬಿ.ಶಿವಣ್ಣ :- ಮಾನ್ಯ ಅಧ್ಯಕ್ಷರೇ, ''ಖಂಡ 45ಕ್ಕೆ ತಿದ್ದುಪಡಿಯನ್ನು ಮಂಡಿಸುತ್ತೇನೆ.''

(ಅ) ಖಂಡ 45 ರಲ್ಲಿ (4) ನೇ ಉಪ-ಖಂಡದಲ್ಲಿ (ಎ) ಬಾಬಿನಲ್ಲಿ ವಿಷಯಗಳಿಗೆ ಸಂಬಂಧಿಸಿದಂತೆ, ಎಂಬ ಪದಗಳ ತರುವಾಯ, ಈ ಪರವಾಗಿ ಸಿಂಡಿಕೇಟಿನಿಂದ ಅಧಿಕೃತನಾದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸ್ಥಳೀಯ ಎಂಬ ಪದಗಳನ್ನು ಸೇರಿಸತಕ್ಕದ್ದು.

(ಆ) ಅದೇ ಖಂಡದ (5) ನೇ ಉಪ-ಖಂಡದಲ್ಲಿ ಕೊನೆಯಲ್ಲಿ ಮತ್ತು ಅದಕ್ಕನುಸಾರವಾಗಿ ವಿಶ್ವವಿದ್ಯಾಲಯವು ಆದೇಶಗಳನ್ನು ಹೊರಡಿಸತಕ್ಕದ್ದು ಎಂಬ ಪದಗಳನ್ನು ಸೇರಿಸತಕ್ಕದ್ದು.

(ಇ) ಅದೇ ಖಂಡದ (6) ನೇ ಉಪ-ಖಂಡದಲ್ಲಿ ಯಾವ ಅವಧಿಗಾಗಿ ಸಂಯೋಜನೆ ಗೊಂಡಿದೆಯೊ ಎಂಬ ಪದಗಳ ತರುವಾಯ ವಿಶ್ವವಿದ್ಯಾಲಯದ ಆದೇಶವು ಎಂಬ ಪದಗಳನ್ನು ಸೇರಿಸತಕ್ಕದ್ದು.

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ :

ಅ) ಖಂಡ 45ರಲ್ಲಿ (4)ನೇ ಉಪ-ಖಂಡದಲ್ಲಿ (ಎ) ಬಾಬಿನಲ್ಲಿ ವಿಷಯಗಳಿಗೆ ಸಂಬಂಧಿಸಿದಂತೆ, ಎಂಬ ಪದಗಳ ತರುವಾಯ ಈ ಪರವಾಗಿ ಸಿಂಡಿಕೇಟಿನಿಂದ ಅಧಿಕೃತನಾದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸ್ಥಳೀಯ ಎಂಬ ಪದಗಳನ್ನು ಸೇರಿಸತಕ್ಕದ್ದು.

ಆ) ಅದೇ ಖಂಡದ (5) ನೇ ಉಪ-ಖಂಡದಲ್ಲಿ ಕೊನೆಯಲ್ಲಿ 'ಮತ್ತು ಅದಕ್ಕನುಸಾರವಾಗಿ ವಿಶ್ವವಿದ್ಯಾಲಯವು ಆದೇಶಗಳನ್ನು ಹೊರಡಿಸತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಇ) ಅದೇ ಖಂಡದ (6) ನೇ ಉಪ-ಖಂಡದಲ್ಲಿ 'ಯಾವ ಅವಧಿಗಾಗಿ ಸಂಯೋಜನೆ' ಗೊಂಡಿದೆಯೊ ಎಂಬ ಪದಗಳ ತರುವಾಯ 'ವಿಶ್ವವಿದ್ಯಾಲಯದ ಆದೇಶವು ಎಂಬ ಪದಗಳನ್ನು ಸೇರಿಸತಕ್ಕದ್ದು.'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 45 ತಿದ್ದುಪಡಿಯೊಂದಿಗೆ :

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ ,

''ಖಂಡ 45, ತಿದ್ದುಪಡಿಯೊಂದಿಗೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 45 ತಿದ್ದುಪಡಿಯೊಂದಿಗೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 46 ರಿಂದ 48 :-

ಉಪಾಧ್ಯಕ್ಷರು :- '' ಖಂಡ 46 ರಿಂದ 49 ಎರಡೂ ಸೇರಿದಂತೆ ಈ ವಿದೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 46 ರಿಂದ 48 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 49 ಕ್ಕೆ ತಿದ್ದುಪಡಿ :-

ಶ್ರೀ ಬಿ. ಶಿವಣ್ಣ :- ಮಾನ್ಯ ಅಧ್ಯಕ್ಷರೇ, ಖಂಡ 49ಕ್ಕೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಸದರಿ ವಿಧೇಯಕದ 49ನೇ ಖಂಡದ (9) ನೇ ಉಪ-ಖಂಡದಲ್ಲಿ'' ಪ್ರಾಧ್ಯಾಪಕರು ಮತ್ತು ಎಂಬ ಪದಗಳ ತರುವಾಯ ರೀಡರುಗಳ ಎಂಬ ಪದವನ್ನು ಸೇರಿಸತಕ್ಕದ್ದು''

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ :

''ಸದರಿ ವಿಧೇಯಕದ 49ನೇ ಖಂಡದ (9)ನೇ ಉಪ-ಖಂಡದಲ್ಲಿ 'ಪ್ರಾಧ್ಯಾಪಕರು ಮತ್ತು ಎಂಬ ಪದಗಳ ತರುವಾಯ ರೀದರುಗಳ ಎಂಬ ಪದವನ್ನು ಸೇರಿಸತಕ್ಕದ್ದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 49 ತಿದ್ದುಪಡಿಯೊಂದಿಗೆ :- ಉಪಾಧ್ಯಕ್ಷರು ಪ್ರಸ್ತಾವ ಏನೆಂದರೆ :

''ಖಂಡ 49 ತಿದ್ದುಪಡಿಯೊಂದಿಗೆ ಈ ವಿಧೇಯಕದ ಅಂಗವಾಗಿರುತ್ತದೆ ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 49 ತಿದ್ದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 50 ರಿಂದ 65 :-

ಉಪಾಧ್ಯಕ್ಷರು :- ''ಖಂಡ 50 ರಿಂದ 65 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 50 ರಿಂದ 65 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ : -

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ :- ''ಮೊದಲ ಖಂಡ್ರ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲ ಖಂಡ್ರ ಲೀರ್ಘ ಶೀರ್ಷಿಕೆ ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಬಿ.ಶಿವಣ್ಣ :- 1994 ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿದೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ ''1994 ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

7.30. ಪಿ.ಎಂ

ಉಪಾಧ್ಯಕ್ಷರು:-ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತವಾದ ನಿರ್ಮಾಣಗಳನ್ನು ಸಕ್ರಮಗೊಳಿಸುವ ಬಗ್ಗೆ.....

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ, ನಮಗೆ ಹೇಳಿಕೆಗಳು ಬರಬೇಕಾಗಿದೆ ನಮಗೇನು ಅರ್ಧರಾತ್ರಿಯಲ್ಲಿ ಹೇಳಿಕೆಗಳನ್ನು ತಾವು ಕೊಡಿಸುತ್ತೀರಾ? ಮಾನ್ಯ ಗೃಹಮಂತ್ರಿಗಳು ಇದ್ದಾರೆ, ಅವರಿಂದ ಕೊಡಿಸಿ. ಜೀವನ್‌ಭೀಮಾ ನಗರದಲ್ಲಿ ರಂಗನಾಥ ಅವರ ಬಗ್ಗೆ ನಡೆದಿರತಕ್ಕಂಥ ಅನ್ಯಾಯದ ಬಗ್ಗೆ ಎರಡನೆಯ ಸಾರಿ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ....

ಉಪಾಧ್ಯಕ್ಷರು:- ಈಗ ಮಾನ್ಯ ಸಚಿವರು ಬಂದಿದ್ದಾರೆ...

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದಕ್ಕೆ ನಾವು ಒಪ್ಪಿಕೊಂಡ ಕಾರಣ ಈಗ ಆರು ಬಿಲ್‌ಗಳು ಪಾಸ್ ಆದವು.

ಶ್ರೀ ವಾಟಾಳ್ ನಾಗರಾಜ್:- ಅವರು ತಯಾರಾಗಿದ್ದಾರೆ. ಅವರಿಂದ ಹೇಳಿಕೆಯನ್ನು ಕೊಡಿಸಿಬಿಡಿ.

ಉಪಾಧ್ಯಕ್ಷರು:- ದಯಮಾಡಿ ಅವರು ಏನು ಹೇಳುತ್ತಾರೋ ಕೇಳಿ. ಅವರೇ ಹೇಳುತ್ತಾರೋ, ಇಲ್ಲ ಮಾನ್ಯ ಮುಖ್ಯಮಂತ್ರಿಗಳು ಬರಬೇಕೆಂದು ಹೇಳುತ್ತಾರೋಗೊತ್ತಿಲ್ಲ. ಅವರು ಹೇಳುವುದನ್ನು ಮೊದಲು ಕೇಳೋಣ. ತಾವು ದಯಮಿಟ್ಟು ಕೇಳಿ. ಈಗ ಮಾನ್ಯ ಗೃಹಸಚಿವರು ಇದ್ದಾರೆ. ಅವರು ಉತ್ತರ ಕೊಡುತ್ತೇನೆ ಎಂದು ಹೇಳುತ್ತಾರೋ, ಇಲ್ಲ ಮುಖ್ಯಮಂತ್ರಿಗಳು ಬರಬೇಕೆಂದು ಹೇಳುತ್ತಾರೋ ಹೇಳಲಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಗೃಹಸಚಿವರೇ ಕೊಡಲಿ.

(ಗೊಂದಲ)

ಶ್ರೀ ಧರ್ಮಸಿಂಗ್:- ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಆರು ಬಿಲ್ಲ್‌ಗಳನ್ನು ಪಾಸ್ ಮಾಡಿಸಿಕೊಟ್ಟಿದ್ದೀರಿ. ಇದು ಕೂಡಲ ಸಂಗಮ ಡೆವಲಪ್‌ಮೆಂಟ್ ಬೋರ್ಡ್ ಒಂದು. ಇನ್ನೊಂದು ಟಿಕ್ನಿಕಲ್ ಯೂನಿವರ್ಸಿಟಿ ಬಗ್ಗೆ. ಇವು ಎರಡೇ ಇರುವುದು. ಇದರಲ್ಲಿ ಹೆಚ್ಚು ಚರ್ಚೆಯಿಲ್ಲ. ಏಕೆಂದರೆ ಇಲ್ಲಿಂದ ಹೋಗಿ ಅಲ್ಲಿ ಪಾಸ್ ಆಗಬೇಕಲ್ಲಾ?

ಶ್ರೀ ವಾಟಾಳ್ ನಾಗರಾಜ್:- ಅವರು ಸ್ಟೇಟ್‌ಮೆಂಟ್ ಹೇಳಿಬಿಡಲಿ. ಎರಡು ನಿಮಿಷಗಳಲ್ಲಿ ಮುಗಿದುಹೋಗಿಬಿಡುತ್ತದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:-ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಕುಳಿತು ಕೊಂಡಿದ್ದೇವೆ...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:-ಆರು ಗಂಟೆಯಿಂದ ಇಲ್ಲಿ ಕಾಯುತ್ತಿದ್ದೇವೆ. ಮುಖ್ಯಮಂತ್ರಿಗಳು ಬರುವುದಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು:-ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರದ್ದು ಒಂದು ಬಿಲ್ ಅಲ್ಲಿ ಇದೆಯಂತೆ....

ಶ್ರೀ ವಾಟಾಳ್ ನಾಗರಾಜ್:-ಈಗ ಗೃಹಮಂತ್ರಿಗಳೇ ಹೇಳಿಕೆಯನ್ನು ಕೊಡಲಿ.

ಶ್ರೀ ಬಿ.ಎಚ್.ಬಿನ್ನಿಕೋಡ್:- ಬೆಳಿಗ್ಗೆಯಿಂದ ಕುಳಿತಿದ್ದೇವೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕುಳಿತುಕೊಳ್ಳಿ ಸ್ವಾಮಿ. ನಿಮಗೇನು ಜವಾಬ್ದಾರಿ ಬೇಡವೇ?

ಉಪಾಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ, ತಾವು ದಯವಿಟ್ಟು ಕುಳಿತು ಕೊಳ್ಳಿ. ಮಾನ್ಯ ಹಿರಿಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

ಶ್ರೀ ಕೆ.ಎಚ್.ರಂಗನಾಥ್:-ಸಾಮಾನ್ಯವಾಗಿ ಸಭೆಯ ಕೊನೆಯ ದಿವಸ....

ಶ್ರೀ ವಾಟಾಳ್ ನಾಗರಾಜ್:- ಏನು ಸ್ವಾಮಿ ಇದು? ಬೆಳಿಗ್ಗೆಯಿಂದ ಕುಳಿತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ನಾವು ನಿಮಗೆ ಸಹಕಾರ ಮಾಡುತ್ತಾ ಇದ್ದೇವೆ. ಈಗ ಗೃಹಮಂತ್ರಿಗಳಿಂದ ಉತ್ತರ ಬರಬೇಕಾಗಿದೆ. ಹನ್ನೊಂದು ಗಂಟೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದವರು, ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಕೇಳಿದರೆ ಗವರ್ನಮೆಂಟ್ ಬಿಸಿನೆಸ್ ಅನ್ನು ಪಾಸ್ ಮಾಡುವುದಕ್ಕೆ ಹತ್ತಿದ್ದೀರಿ. ನಾವು ಏನು ಹೇಳಬೇಕು? ನಾವು ಆಪಾದನೆ ಮಾಡಿದರೆ ತಮಗೆ ಸಿಟ್ಟು ಬರಬಹುದು. ಬರೀ ಸರ್ಕಾರದ ಬಿಸಿನೆಸ್ ಅಷ್ಟೇ ಪಾಸ್ ಮಾಡುವುದಕ್ಕೆ ನಾವು ಇಲ್ಲಿ ಇರುವುದೇ? ನಾವು ಇಲ್ಲಿ ಹನ್ನೊಂದು ಗಂಟೆಯಿಂದ ಕಾಯುತ್ತಾ ಇದ್ದೇವೆ. ಉತ್ತರ ನಮಗೆ ಬರಬೇಕೋ ಬೇಡವೋ?

ಉಪಾಧ್ಯಕ್ಷರು:- ಉತ್ತರ ಕೊಡಬಾರದು ಎನ್ನುವ ಉದ್ದೇಶ ಯಾರಿಗೂ ಇಲ್ಲ. ವಾಟಾಳ್ ನಾಗರಾಜ್ ಅವರೇ, ಮಾನ್ಯ ಹಿರಿಯ ಸಚಿವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ ಕೇಳುವಷ್ಟು ತಾಳ್ಮೆ ಇಲ್ಲವೇನು ನಿಮಗೆ?

ಶ್ರೀ ವಾಟಾಳ್ ನಾಗರಾಜ್:- ಇನ್ನೂ ಒಂದು ಗಂಟೆ ಇದೆ. ತಾವು ನಮ್ಮನ್ನು ತಪ್ಪುದಾರಿಗೆ ಎಳೆಯುತ್ತಿದ್ದೀರಿ.

ಉಪಾಧ್ಯಕ್ಷರು:- ಅವರು ಏನು ಹೇಳುತ್ತಾರೆ ಅದನ್ನು ಕೇಳುವಷ್ಟು ತಾಳ್ಮೆ ಇಲ್ಲದಿದ್ದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ, ಅದನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್:-ನಾವು ಕೇಳುವುದಿಲ್ಲ ಎಂದು ಹೇಳುವುದೇ ಇಲ್ಲ.

ಶ್ರೀ ಕೆ.ಎಚ್.ರಂಗನಾಥ್:-ಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತು ಮತ್ತು ವಾಟಾಳ್ ನಾಗರಾಜ್ ಅವರಿಗೆ ಗೊತ್ತು. ಸಭೆಯ ಕೊನೆಯ ದಿವಸ ಸ್ವಲ್ಪ ಹೆಚ್ಚುಕಾಲ ನಾವು ಕೂಡಲೇಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:-ನಾವು ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಮೊದಲು ಹೇಳಿಕೆಯನ್ನು ಕೊಡಿಸಿಬಿಡಿ.

ಶ್ರೀ ಕೆ.ಎಚ್.ರಂಗನಾಥ್:-ಅದು ಬಹಳ ಮಟ್ಟಿಗೆ ಆಗಬಹುದು ಎಂದು ಕಾಣುತ್ತದೆ. ಮುಖ್ಯಮಂತ್ರಿಗಳು ಬರುತ್ತಾರೆ.....

(ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದರು)

ಶ್ರೀ ಕೆ.ಎಚ್.ರಂಗನಾಥ್:-ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರುವ ಹಾಗೆ, ಎರಡೂ ಸದನಗಳೂ ಬೆಳಿಗ್ಗೆ ಒಂಭತ್ತು ಗಂಟೆಯಿಂದ ಸೇರಿವೆ. ಆದ್ದರಿಂದ ಇದೆಲ್ಲಾ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್:-ಈಗ ಆರು ಮಸೂದೆಗಳನ್ನು ಚರ್ಚೆ ಇಲ್ಲದೆ ಅವುಗಳಿಗೆ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಚ್.ರಂಗನಾಥ್:-ಈ ಬಿಲ್ ಆಗಿ ಬಿಡಲಿ....

ಶ್ರೀ ವಾಟಾಳ್ ನಾಗರಾಜ್:- ಹೇಳಿಕೆಯನ್ನು ಮೊದಲು ಕೊಡಿಸಿಬಿಡಿ. ನಾವು ರಾತ್ರಿ ಒಂದು ಗಂಟೆಯಾದರೂ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಸಾಂಡ್ರಾ ವಿಚಾರದಲ್ಲಿ ಒಂದು ಮತ್ತು ಇನ್ನೊಂದು ಶ್ರೀ. ವಾಟಾಳ್ ನಾಗರಾಜ್ ಅವರು ಏನು ರೈಸ್ ಮಾಡಿದ್ದಾರೆ, ಅವರೆಡಕ್ಕೂ ಮೊದಲು ಉತ್ತರ ಕೊಡಿ.

ಶ್ರೀ ವಾಟಾಳ್ ನಾಗರಾಜ್:-ಜೀವನ ಭೀಮಾನಗರದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ನಡೆದ ಘಟನೆ ಬಗ್ಗೆ, ಹೇಳಿಕೆಯನ್ನು ಕೊಟ್ಟುಬಿಡಿ ಸ್ವಾಮಿ.

ಮುಖ್ಯ ಮಂತ್ರಿಗಳ ಹೇಳಿಕೆ

ವಿಷಯ:-ಜೀವನ ಭೀಮಾನಗರ ಪೋಲೀಸ್ ಠಾಣೆಯಲ್ಲಿ ನಡೆದ ಘಟನೆ ಬಗ್ಗೆ:-

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿ):-ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಮತ್ತು ಅನೇಕ ಸ್ನೇಹಿತರು ಜೀವನಭೀಮಾನಗರದಲ್ಲಿ ನಡೆದ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮ ಜೊತೆ ಕೂಡ ಮಾತನಾಡಿದ್ದೇನೆ. ಅದರ ಬಗ್ಗೆ ನಾವು ವಿಚಾರ ಮಾಡಿದ್ದೇವೆ. ತಪ್ಪಿತಸ್ಥರು ಅಧಿಕಾರಿಗಳು ಅಥವಾ ಯಾರೇ ಇರಲಿ, ಅವರನ್ನು ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ಅದಕ್ಕೆ ನಾವು we are entrusting that case to COD. I am asking the COD, IGP to go within a week ಅಲ್ಲಿ ಹೋಗಿ ಅದನ್ನು ತನಿಖೆ ಮಾಡಿ ಬಂದು ನಮಗೆ ಒಂದು ವರದಿಯನ್ನು ಕೊಡಲಿ. The question is there was an alleged altercation between Ranganath and....

ತಾವು ಹೇಳಿದ್ದೀರಿ, ಅದು ಸರಿಯಿಲ್ಲ ಎಂದು ಹೇಳಿ. ಪ್ರಶ್ನೆ ಏನೆದರೆ - Suppose Ranganath has done anything to the Police-Sub-Inspector or the Sub-Inspector has something against him. See there was supposed to be some physical altercation....